**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹೊನ್ನಾವರ**

**ಫೌಜುದಾರಿ ಪ್ರಕರಣ ಸಂಖ್ಯೆ : 571/2024**

**ಚಾ.ಸಾಃ 3, ಫ್ರಾ.ಸಾಃ 4**

| | |
|---|---|
| ಸಾಕ್ಷಿದಾರನ ಹೆಸರು | ಗಣಪತಿ ಗೌಡ |
| ತಂದೆಯ ಹೆಸರು | ನಾಗಪ್ಪ ಗೌಡ |
| ವಯಸ್ಸು | 47 ವರ್ಷಗಳು |
| ಉದ್ಯೋಗ | ಕೃಷಿ |
| ವಾಸ್ತವ್ಯ | ಕಾನಗೋಡ |

**ಸಾಕ್ಷಿಯನ್ನು ದಿನಾಂಕಃ 27-02-2026 ರಂದು ಕರೆಸಿ ಪ್ರಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆಃ ಎಪಿಪಿಯವರಿಂದ,**

ದಿನಾಂಕ 18-01-2024 ರಂದು ಸಂಜೆ 03-00 ಗಂಟೆ ಸಮಯಕ್ಕೆ ಕೆಳಗಿನ ಮೂಡ್ಕಣಿ ಹತ್ತಿರದ ರಾಷ್ಟ್ರೀಯ ಹೆದ್ದಾರಿಯಲ್ಲಿ ಒಂದು ಬೈಕು ಮತ್ತು ಫೋರ್ಸ ವಾಹನಕ್ಕೆ ಅಪಘಾತ ಆಗಿದ್ದು ಸದರಿ ವಿಚಾರಕ್ಕೆ ಪೋಲಿಸರು ನನ್ನನ್ನು ಮತ್ತು ಇನ್ನೊಬ್ಬರನ್ನು ಕರೆದು ಸ್ಥಳ ಪಂಚನಾಮೆ ಮಾಡಿ, ಒಂದು ಕಚ್ಚಾ ನಕಾಶೆಯನ್ನು ತಯಾರಿಸಿ ನಾಲ್ಕು ಫೋಟೋ ತೆಗೆದಿರುತ್ತಾರೆ. ಸ್ಥಳ ಪಂಚನಾಮೆಯನ್ನು ನೋಡುತ್ತಿದ್ದು ನಿಪಿ-2 ಎಂದು, ಸಾಕ್ಷಿ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ಕಚ್ಚಾ ನಕಾಶೆಯನ್ನು ನೋಡುತ್ತಿದ್ದು ನಿಪಿ-3 ಎಂದು, ಸಾಕ್ಷಿ ಸಹಿಯನ್ನು ನಿಪಿ-3(ಎ) ಎಂದು ಗುರುತಿಸಲಾಯಿತು. 4 ಫೋಟೋಗಳನ್ನು ನೋಡುತ್ತಿದ್ದು ಅವುಗಳನ್ನು ನಿಪಿ-4 ರಿಂದ 7 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿಗಳ ಪರ ವಕೀಲರಾದ ಶ್ರೀ ವಿ. ಆರ್. ನಾಯ್ಕರಿಂದಃ**

ಮೃತ ವ್ಯಕ್ತಿ ನಮ್ಮ ಊರಿನವರು. ಚಾಸಾ-1 ರವರು ಪಂಚನಾಮೆಯ ಕಾಲಕ್ಕೆ ನನ್ನನ್ನು ಕರೆದಿರುತ್ತಾರೆ. ಪಂಚನಾಮೆಯನ್ನು ಬರೆಯಲು ಪೋಲಿಸರಿಗೆ ಅಲ್ಲಿ ಏನಿತ್ತೋ ಅದರ ಬಗ್ಗೆ ನಾನೇ ಮಾಹಿತಿ ನೀಡಿರುತ್ತೇನೆ. ಅಪಘಾತ ಆದ ಸ್ಥಳದಲ್ಲಿ ಸಣ್ಣ ಸಣ್ಣ ಗಾಜಿನ ಚೂರುಗಳು, ಬೈಕು ಉಜ್ಜಿ ಹೋಗಿದ್ದ ಗುರುತು, ಇಂಡಿಕೇಟರ್ ಪೀಸ್ ಇದ್ದು ರಸ್ತೆಯಿಂದ ಪಕ್ಕದಲ್ಲಿ ಮೃತ ಬಿದ್ದ ಜಾಗದಲ್ಲಿ ರಕ್ತದ ಗುರುತು ಇತ್ತು. ಸ್ಥಳದಲ್ಲಿ ಬಿದ್ದ ವಸ್ತುಗಳನ್ನು ಪೋಲೀಸರು ತೆಗೆದುಕೊಂಡಿರುವುದಿಲ್ಲ. ಚಾಸಾ-1 ರವರು ಪಂಚನಾಮೆಯ ಕಾಲಕ್ಕೆ ಸ್ಥಳದಲ್ಲಿ ಇದ್ದು ಅವರು ಅಪಘಾತದ ಸ್ಥಳವನ್ನು ತೋರಿಸಿರುತ್ತಾರೆ. ಅಪಘಾತ ಆದ ಸ್ಥಳವು ರಾಷ್ಟ್ರೀಯ ಹೆದ್ದಾರಿಯ ಎಡಪಟ್ಟೆ ಮತ್ತು ಮಧ್ಯದ ಬಿಳಿ ಪಟ್ಟೆಯ ನಡುವೆ ಆಗಿದೆ ಅಂತ ತೋರಿಸಿರುತ್ತಾರೆ. ಬ್ರೇಕ್ ಹಾಕಿದ ಮಾರ್ಕಗಳು ಸ್ಥಳದಲ್ಲಿ ಇತ್ತು. ಅದು ಅಪಘಾತ ಪಡಿಸಿದ ಫೋರ್ಸ ಗಾಡಿಯ ಟಯರ್ ಮಾರ್ಕಗಳಾಗಿದ್ದವು. ಸದರಿ ಮಾರ್ಕಗಳು ರಸ್ತೆಯ ಬಲಬದಿಯಿಂದ ಎಡಬದಿಗೆ ಇರುತ್ತದೆ. ಸದರಿ ಮಾರ್ಕ ಸುಮಾರು 8 ಅಡಿ ಇತ್ತು. ಅದು ಒಂದೇ ಟಯರಿನ ಮಾರ್ಕ ಇತ್ತು, ಎರಡು ಟಯರಿನ ಮಾರ್ಕ ಇರಲಿಲ್ಲ. ಪೋಲೀಸರು ಅದನ್ನು ಪಂಚನಾಮೆಯಲ್ಲಿ ಬರೆದಿದ್ದಾರೋ ಇಲ್ಲವೋ ನಾನು ನೋಡಲಿಲ್ಲ. ಅಪಘಾತ ಸ್ಥಳದ ಕಚ್ಚಾ ನಕಾಶೆಯನ್ನು ತಯಾರಿಸಿದ್ದರು. ಅದರಲ್ಲಿ ಟಯರ್ ಮಾರ್ಕನ್ನು ಗುರುತಿಸಿದ್ದಾರೋ ಇಲ್ಲವೋ ನನಗೆ ಗೊತ್ತಿಲ್ಲ. ಪಂಚನಾಮೆಯನ್ನು ಸ್ಥಳದಲ್ಲಿಯೇ ಪ್ರಿಂಟರ

ಮೂಲಕ ಪ್ರಿಂಟ್ ತೆಗೆದಿರುತ್ತಾರೆ. ಅದಕ್ಕೆ ನಾನು ಸ್ಥಳದಲ್ಲಿ ಸಹಿ ಮಾಡಿರುತ್ತೇನೆ. ಅದನ್ನು ನಾನು ಓದಿ ನೋಡಿದ್ದೇನೆ. ಪಂಚನಾಮೆಯಲ್ಲಿ ಚಕ್ ಬಂದಿಯನ್ನು ಬರೆದಿದ್ದಾರೆ. ಸ್ಥಳದಲ್ಲಿ ಅಳತೆ ಮಾಡಿದ್ದಾರೆ. ಮೃತ ವ್ಯಕ್ತಿ ನಮ್ಮ ಊರಿನವನಾದ್ದರಿಂದ ಅವನಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇರುವುದಿಲ್ಲ.**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

ಓ.ಹೇ.ಕೇ. ಸರಿ ಇದೆ.

**Sd/-**

**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾದಂಡಾಧಿಕಾರಿಗಳು, ಹೊನ್ನಾವರ**